**ದಿನಾಂಕ: 10.08.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ.ಆರ್ ಕೆ ಕೆ ವಕೀಲರಿಂದ

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳನ್ನು ನಿಶಾನಿಸಬೇಕೆಂದು ಕೇಳಿಕೊಳ್ಳುತ್ತೇನೆ.

| | |
|---|---|
| ನಿ ಪಿ 1 | ಪೋಲಿಸ್ ದೂರು |
| ನಿ ಪಿ 2 | ಪ್ರ.ವ.ವರದಿ |
| ನಿ ಪಿ 3 | ಸ್ಥಳ ಪಂಚನಾಮೆ |
| ನಿ ಪಿ 4 | ಕಚ್ಚಾನಕ್ಷೆ |
| ನಿ ಪಿ 5 | ಗಾಯದ ಪ್ರಮಾಣಪತ್ರ |
| ನಿ ಪಿ 6 | ಎಂ ವಿ ಐ ವರದಿ |
| ನಿ ಪಿ 7 | ಅಂತಿಮ ವರದಿ |
| ನಿ ಪಿ 8 ಮತ್ತು 9 | 2 ಆರ್ ಟಿ ಸಿ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ |
| ನಿ ಪಿ 10 | 8 ಮೆಡಿಕಲ್ ಬಿಲ್ಲುಗಳು |
| ನಿ ಪಿ 11 | 23 ಔಷಧಿ ಚೀಟಿಗಳು |
| ನಿ ಪಿ 12 | 3 ಎಕ್ಸರೆಗಳನ್ನು ಒಟ್ಟಾರೆಯಾಗಿ |
| ನಿ ಪಿ 13 | ನನ್ನ ಆಧಾರಕಾರ್ಡನ ನೋಟರಿ ಪ್ರತಿಯನ್ನು ಮೂಲ ಪ್ರತಿ ನೋಡಿ ಗುರುತಿಸಿ ಮೂಲ ಪ್ರತಿಯನ್ನು ಅರ್ಜಿದಾರರಿಗೆ ಸೂಕ್ತ ಹಿಂಬರಹದೊಂದಿಗೆ ಮರಳಿಸಲಾಯಿತು. |
| ನಿ ಪಿ 14 | ಡಿಸ್ಚಾರ್ಜ ಸಮರಿ |
| ನಿ ಪಿ 15 | ಹುಬ್ಬಳ್ಳಿ ಸ್ಕ್ಯಾನ್ ಸೆಂಟರ್ ರಿಪೋರ್ಟ |

ನನ್ನ ಅರ್ಜಿಯಲ್ಲಿ ಕೋರಿದಂತೆ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎ ಎಸ್ ಪಿ ವಕೀಲರಿಂದಃ**

ಅಪಘಾತ ಸಮಯದಲ್ಲಿ ನನಗೆ 65 ವರ್ಷ ವಯಸ್ಸಾಗಿತ್ತು ಎಂದರೆ ನಿಜ. ಅಪಘಾತದ ದಿನ ಬೈಕನ್ನು ನಾನೇ ಚಲಾಯಿಸುತ್ತಿದ್ದೆ. ನನ್ನ ಬಳಿ ಮೊಟಾರ್ ಬೈಕ ಚಾಲನಾ ಪತ್ರ ಇದೆ ಅದನ್ನು ವಕೀಲರಿಗೆ ಕೊಟ್ಟಿದ್ದೇನೆ. ನನ್ನ ಬಳಿ ಯಾವುದೇ ಚಾಲನಾ ಪತ್ರ ಇರುವುದಿಲ್ಲ ಆದ್ದರಿಂದ ಅದನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತ ಮುಖಾಮುಖಿಯಾಗಿದೆ. ನಾನು 1 ನೇ ಎದುರುದಾರ ಬೈಕನ ಮೇಲೆ ದೂರನ್ನು ಕೊಟ್ಟೆ ಸದರಿ ಬೈಕ ಸವಾರನಿಗೆ ಚಾಲನಾ ಪತ್ರ ಇದ್ದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆತನ ಬಳಿ ಚಾಲನಾ ಪತ್ರ ಇಲ್ಲದ್ದರಿಂದಲೇ ಸಂಬಂದಪಟ್ಟ ಪೋಲಿಸರು ಕಲಂ 3/181 ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ನನಗೆ ಯಾವುದೇ ಮೂಳೆ ಮುರಿತ ಗಾಯ ಆಗಿಲ್ಲ ಎಂದರೆ ಸರಿಯಲ್ಲ.

ಅಪಘಾತದ ತಕ್ಷಣ ನಾನು ಹಾನಗಲ್ ನ ಸರಕಾರಿ ಆಸ್ಪತ್ರೆಗೆ ದಾಖಲಾದೆ, ನಂತರ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆ ನಂತರ ಹುಬ್ಬಳ್ಳಿಯ ಬಿಜಾಪುರ ಆಸ್ಪತ್ರೆಗಳಲ್ಲಿ ದಾಖಲಾಗಿ ಚಿಕಿತ್ಸೆ ಪಡೆದೆ. ಆ ಬಗ್ಗೆ ಯಾವುದೇ ದಾಖಲೆ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಕೆಎಂಸಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿ ನನ್ನ ತಲೆಗೆ ಹೊಲಿಗೆಗಳನ್ನು ಹಾಕಿದ್ದಾರೆ. ಹುಬ್ಬಳ್ಳಿಯ ಬಿಜಾಪುರ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಆದರೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ಹುಬ್ಬಳ್ಳಿ ಕಿಮ್ಸ ಆಸ್ಪತ್ರೆ ಸರಕಾರಿ ಆಸ್ಪತ್ರೆಯಾಗಿದ್ದರಿಂದ ಅಲ್ಲಿ ಯಾವುದೇ ಖರ್ಚು ವೆಚ್ಚ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನಗೆ ಯಾವುದೇ ಶಾಶ್ವತ ಅಂಗನ್ಯೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ತಲೆಯ ಶಸ್ತ್ರ ಚಿಕಿತ್ಸೆಗೂ ಅಪಘಾತಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಿಪಿ-8 ರಿಂದ 12 ರಲ್ಲಿಯ ಎಲ್ಲಾ ವೈದ್ಯಕೀಯ ದಾಖಲಾತಿಗಳನ್ನು ನಾನು ಹೆಚ್ಚಿನ ಪರಿಹಾರ ಪಡೆಯುವ ದುರುದ್ದೇಶದಿಂದ ಈ ಕೇಸಿನಲ್ಲಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳಲ್ಲಿ ಅಪಘಾತದ ಗಾಯದಿಂದ ನನಗೆ ನರದ ದೌರ್ಬಲ್ಯ ಆಗಿದೆ ಅಂತಾ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನಗೆ ಯಾವುದೇ ಆದಾಯ ಇರಲಿಲ್ಲ ಹಾಗೂ ನಾನು ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಕೃಷಿ ಚಟುವಟಿಕೆಯಿಂದ ಪ್ರತಿಮಾಹೆ 40 ಸಾವಿರ ಗಳಿಸುತ್ತಿದ್ದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಪಾದಿತ

ವಾಹನದ ಚಾಲನಾ ಪತ್ರ ಇದ್ದಿರಲಿಲ್ಲ ಆದ್ದರಿಂದ ನಾನು ಕೇಳಿದ ಪರಿಹಾರಕ್ಕೆ 2 ನೇ ಎದುರುದಾರ ಸಂಸ್ಥೆ ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ ಎ ಎಚ್ ಡಿ ವಕೀಲರಿಂದಃ**

ನಾನು ಈ ಮುಂಚೆ ಕೃಷಿ ಚಟುವಟಿಕೆ ಮಾಡುತ್ತಿದ್ದೆ. ಸದರಿ ಜಮೀನು ಹಾನಗಲ್ ತಾಲೂಕಿನ ಗುಡಗುಡಿ ಗ್ರಾಮದಲ್ಲಿದೆ. ಅದರ ಸರ್ವೆ ನಂ. 92/1 ಮತ್ತು 92/2. ಆಪಾದಿತ ವಾಹನ 2 ನೇ ಎದುರುದಾರ ಬಳಿ ವಿಮಾಗೊಂಡಿತ್ತು ಎಂದರೆ ನಿಜ. ಆದ್ದರಿಂದ ನಾನು ಕೇಳಿದ ಪರಿಹಾರಕ್ಕೆ 2 ನೇ ಎದುರುದಾರ ಸಂಸ್ಥೆ ಬಾಧ್ಯಸ್ಥ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತ 1 ನೇ ಎದುರುದಾರರ ವಾಹನದಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅರ್ಜಿ ಕಾಲಮಿತಿಯಲ್ಲಿರುವುದಿಲ್ಲ ಆದ್ದರಿಂದಲೇ ನನ್ನ ಅರ್ಜಿಯಲ್ಲಿ ಕೇಳಿದ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–8 ರಿಂದ 12 ರಲ್ಲಿಯ ಎಲ್ಲಾ ವೈದ್ಯಕೀಯ ದಾಖಲಾತಿಗಳನ್ನು ನಾನು ಹೆಚ್ಚಿನ ಪರಿಹಾರ ಪಡೆಯುವ ದುರುದ್ದೇಶದಿಂದ ಈ ಕೇಸಿನಲ್ಲಿ ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

(ಶ್ರೀ. ಮಹೇಶ ಎಸ್. ಪಾಟೀಲ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ ಹಾನಗಲ್

( ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಎದುರುದಾರರು ಹಾಗೂ ಅವರ ವಕೀಲರನ್ನು ಕರೆಯಲಾಯಿತು, ಗೈರು ಹಾಜರಿ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

2 ನೇ ಎದುರುದಾರರು ಏಕಪಕ್ಷೀಯವಾಗಿರುವ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

(ಅರ್ಜಿದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಗಿದೆ)

(ಎದುರುದಾರರು ಮತ್ತು ಅವರ ವಕೀಲರನ್ನು ಕರೆಯಲಾಯಿತು. ಗೈರು ಹಾಜರು, ತಕರಾರು ಸಲ್ಲಿಸಿರುವುದಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)